

ಪ್ರೇಮಿಗಳ ದಿನಾಚರಣೆ ಅಂದ ಕೂಡಲೆ ನಿಮ್ಮ ಪ್ರೇಮಿಯ ನೆನಪು, ಅದರ ಜೊತೆಗಿನ ಮೈಪುಳಕ, ಮನಸ್ಸಿನಲ್ಲಿ ಬರುವ ಕಚಗುಳಿ ಇಡುವ ಕಲ್ಪನೆಗಳು– ಇವೆಲ್ಲವೂ ಸಹಜ ಅಲ್ಲವೇ? ಅಂತಹ ಪ್ರೇಮಿ ಕಾಲ್ಪನಿಕ ವ್ಯಕ್ತಿಯಾಗಿದ್ದರೂ ನಿಮ್ಮ ಪ್ರೇಮದ ಕನಸುಗಳ ರುಚಿಗೆ ಮತ್ತು ಸುಮಧುರ ಭಾವನೆಗಳಿಗೆ ಕೊರತೆ ಇರುವುದಿಲ್ಲ! ಇಂತಹ ಪ್ರೇಮವನ್ನು ಶಾಶ್ವತಗೊಳಿಸಲು 'ವ್ಯಾಲೆಂಟೈನ್ಸ್ ದಿವಸ'ದಂದು ನೀವೆಲ್ಲಾ ನಿಮ್ಮ ನಿಮ್ಮ (ನಿಜವಾದ ಅಥವಾ ಕನಸಿನ) ಪ್ರೇಮಿಗಳಿಗೆ ಕೊಡುವ ಉಡುಗೊರೆಯ ಬಗೆಗೆ ಯೋಚಿಸುತ್ತಿದ್ದೀರಲ್ಲವೇ? ಅಥವಾ ಉಡುಗೊರೆಯ ಮೂಲಕ ನಿಮ್ಮ ಪ್ರೇಮವನ್ನು ಪ್ರಥಮ ಬಾರಿಗೆ ಹೇಳಿಕೊಳ್ಳಬೇಕು ಎಂದಿದ್ದೀರಿ. (ಹಾಗೆ ಮಾಡದಿದ್ದರೆ ರಕ್ಷಾಬಂಧನ್ ದಿನದಂದು ಆಕೆ ರಾಖಿ ಕಟ್ಟಿಬಿಡಬಹುದೆನ್ನುವ ಭಯವೂ ನಿಮ್ಮನ್ನು ಕಾಡುತ್ತಿರಬಹುದು!)

ಯುವಜನಾಂಗದ ಎಲ್ಲಾ ಗೆಳೆಯ ಗೆಳತಿಯರಿಗೆ ಈ ಪ್ರೇಮಿಗಳ ದಿನಾಚರಣೆಯ ಸಮಯದಲ್ಲಿ ಒಂದು ವಿಶೇಷ ಉಡುಗೊರೆ ಇಲ್ಲಿದೆ. ಆ ಉಡುಗೊರೆಯನ್ನು ಪಡೆಯಲು ನೀವೆಲ್ಲಾ ಸ್ವಲ್ಪ ಸಹನೆಯಿಂದ ಈ ಲೇಖನವನ್ನು ಸಂಪೂರ್ಣವಾಗಿ, ನಿಧಾನವಾಗಿ ಓದಬೇಕಾಗುತ್ತದೆ. ನೀವು ಓದಿ ಉಡುಗೊರೆಯನ್ನು ಪಡೆದುಕೊಂಡ ಮೇಲೆ ನಿಮ್ಮ ಸ್ನೇಹಿತರಿಗೆಲ್ಲಾ ಓದಲು ಉತ್ತೇಜಿಸಿ. ಅವರೂ ಉಡುಗೊರೆಯನ್ನು ಪಡೆದುಕೊಳ್ಳಲು ಸಹಾಯ ಮಾಡಿ.

ಇದನ್ನು ಓದುವ ಮಾಜಿ ಯುವ ಸ್ನೇಹಿತ, ಸ್ನೇಹಿತೆಯರು ಮತ್ತು ಹಾಲಿ ಹದಿವಯಸ್ಸಿನ ಮಕ್ಕಳ ಪೋಷಕರು ತಮ್ಮ ಮಕ್ಕಳಿಗೆ ಬರಹವನ್ನು ಓದಲು ಉತ್ತೇಜಿಸಿದರೆ ಎಲ್ಲರ ಕೌಟುಂಬಿಕ ವಾತಾವರಣದಲ್ಲಿ ಕಿಂಚಿತ್ತಾದರೂ ಬದಲಾವಣೆಯಾಗಬಹುದು.

## ಏನಿದು ವ್ಯಾಲೆಂಟೈನ್ಸ್ ಡೇ?

ಕ್ರಿಶ್ಚಿಯನ್ನರ ಒಂದು ಧಾರ್ಮಿಕ ಆಚರಣೆಯಾಗಿ ಶುರುವಾಗಿದ್ದು ಈ ವ್ಯಾಲೆಂಟೈನ್ಸ್ ಡೇ. ವ್ಯಾಲೆಂಟಿನಸ್ ಎನ್ನುವ ಸಂತರ ಗುಂಪಿನ ನೆನಪಿಗಾಗಿ ಮತ್ತು ಗೌರವಾರ್ಥವಾಗಿ ಭೋಜನಕೂಟವನ್ನು ಫೆಬ್ರುವರಿ 14ರಂದು ಏರ್ಪಡಿಸಲಾಗುತ್ತಿತ್ತು. ಆದರೆ 18ನೇ ಶತಮಾನದ ಆದಿಭಾಗದಿಂದ ಇದು ಪ್ರೇಮಿಗಳ ದಿನಾಚರಣೆಯಾಗಿ ಪ್ರಸಿದ್ಧವಾಯಿತು. ನಾವು ಶಾಲಾ, ಕಾಲೇಜುಗಳಲ್ಲಿದ್ದ ಸಮಯದಲ್ಲಿ ಭಾರತದಲ್ಲಿ ಇದರ ಕಲ್ಪನೆಯೂ ಇರಲಿಲ್ಲ. ಎಂಟಿವಿ ಯಂತಹ ಕೆಲವು ವ್ಯಾಪಾರೀ ವಾಹಿನಿಗಳು ತಮ್ಮ ಕಾರ್ಯಕ್ರಮಗಳ ಜನಪ್ರಿಯತೆ ಹೆಚ್ಚಿಸಲು 90ರ ದಶಕದಿಂದ ಈ ದಿನಕ್ಕೆ ಹೆಚ್ಚಿನ ಪ್ರಚಾರ ನೀಡತೊಡಗಿದವು.

ಜಾಗತೀಕರಣದಿಂದ ಇಡೀ ಪ್ರಪಂಚದ ಆಗುಹೋಗುಗಳಿಗೆ ಒಮ್ಮೆಲೆ ತೆರೆದುಕೊಂಡ ನಿಮಗೆಲ್ಲಾ ನಿಧಾನವಾಗಿ ಇದೊಂದು ಉತ್ಸವವಾಗತೊಡಗಿತು. ಸಾಂಪ್ರದಾಯಿಕ ವಾತಾವರಣದಲ್ಲಿ ಹತ್ತಿಕ್ಕಲ್ಪಟ್ಟಿದ್ದ ನಿಮ್ಮ ಮನೀಷೆಗಳು ಒಮ್ಮೆಲೆ ಸ್ಫೋಟಗೊಂಡವು. ಇದಕ್ಕೆಂದೇ ಕಾದಿದ್ದ ಹಲವಾರು ಕಂಪೆನಿಗಳು ತಮ್ಮ ವ್ಯಾಲೆಂಟೈನ್ಸ್ ಡೇ ಕಾರ್ಡ್‌ಗಳು ಮತ್ತು ಉಡುಗೊರೆಗಳನ್ನು ಮಾರಲು ಭಾರೀ ಪ್ರಚಾರದೊಡನೆ ಮುನ್ನುಗ್ಗಿದವು. ನಗರಗಳಲ್ಲಿ ಹೋಟೆಲ್‌ಗಳು, ಮಾಲ್‌ಗಳು ಯುವಜನತೆಗಾಗಿ ದೊಡ್ಡ ಉತ್ಸವಗಳನ್ನು ಏರ್ಪಡಿಸಿ ಹಣವನ್ನು ದೋಚತೊಡಗಿದವು. ಪ್ರೇಮದ ನಶೆಯಲ್ಲಿದ್ದ ನಿಮ್ಮ ಮನಸ್ಸುಗಳನ್ನು ಸೆಳೆದು ತಮ್ಮ ಖಜಾನೆ ತುಂಬಿಕೊಳ್ಳುವುದು ಅವರ ಉದ್ದೇಶವಾಗಿತ್ತು..

'ಇಂತಹ ಪಾಶ್ಚಿಮಾತ್ಯರ ಆಚರಣೆಗಳಿಂದ ಭಾರತೀಯ ಸಂಸ್ಕೃತಿ, ಜೀವನ ಪದ್ಧತಿಗಳು ನಾಶವಾಗಿ ಯುವಜನತೆ ದಾರಿ ತಪ್ಪುತ್ತಿದೆ' ಎಂದು ಎಲ್ಲಾ ಧರ್ಮದ ನಾಯಕರು ಪ್ರೇಮಿಗಳ ದಿನಾಚರಣೆಯ ವಿರುದ್ಧ ಪ್ರತಿಭಟಿಸತೊಡಗಿದರು. ಹೀಗೆ ಒಂದು ಕಡೆ ಆಚರಣೆಯ ನಾಟಕಗಳು; ಮತ್ತೊಂದು ಕಡೆ ಪ್ರತಿಭಟನೆಯ ಕೂಗಾಟಗಳು– ಪ್ರತಿವರ್ಷ ನಡೆಯುತ್ತಲೇ ಇವೆ. ವಿಪರ್ಯಾಸವೆಂದರೆ ಇದರಿಂದಾಗಿ ನಿಜವಾದ ಸ್ನೇಹ ಮತ್ತು ಪ್ರೇಮಗಳು ನರಳಿ ನಾಶವಾಗುತ್ತಿವೆ.

ನಿಜವಾದ ಸ್ನೇಹ, ಪ್ರೇಮಗಳಿಗೆ ಇಂತಹ ಆಚರಣೆ ಹಬ್ಬಗಳ ಅಗತ್ಯವಿರುವುದಿಲ್ಲ. ಅವೆಲ್ಲಾ ಅರಳುವುದು ಮೌನದ ಕಣ್ಸನ್ನೆಯಲ್ಲಿ, ಮಧುರವಾದ ಮಾತುಗಳಲ್ಲಿ, ಮಾತಿಲ್ಲದೆ ತಲುಪಿಸುವ ಸಂದೇಶಗಳಲ್ಲಿ, ಮೃದುವಾದ ಸ್ಪರ್ಶದಲ್ಲಿ,–ಒಟ್ಟಾರೆಯಾಗಿ ಇಬ್ಬರ ಅಂತರಂಗಗಳಲ್ಲಿ. ನಿಮ್ಮ ಪ್ರೇಮವನ್ನು ನಿವೇದಿಸಿಕೊಳ್ಳಲು ವ್ಯಾಲೆಂಟೈನ್ಸ್ ದಿನವೇ ಏಕೆ ಬೇಕು ಹೇಳಿ? ಗೌಜು ಗದ್ದಲಗಳಲ್ಲಿ ನೈಜವಾದ ಸ್ನೇಹ, ಪ್ರೇಮಗಳು ಅಂಕುರಿಸುವುದು